ನಗರದ ಡಿವೀರ್ಜ ಡಿಸ್ಟ್ರಿಕ್ಟ್ ಜಡ್ಜೀಯವರ ಕೋರ್ಟ್‌ನಲ್ಲಿ.

ತಾರೀಖು 12ನೇ ಡಿಸಂಬರ್ 1888ನೇ ಇಸವಿ.

ಶಿವಮೊಗ್ಗ ಮತ್ತು ಕಡೂರು ಡಿಸ್ಟ್ರಿಕ್ಟುಗಳಿಂದ ಕಮಿಟಾದ ಮೊಕದ್ದಮೆಗಳ ಸೆಷನ್ಸ್ ದರ್ಯಾಫ್ತ್ತಿಯು, ಶಿವಮೊಗ್ಗದಲ್ಲಿ 1889ನೇ ಇಸವಿಯ ಈ ಕೆಳಗೆ ಕಾಣಿಸುವ ತಾರೀಖುಗಳಲ್ಲಿ ನಡೆಯುವದು ಯೆಂದು ಇದರ ಮೂಲಕ ತಿಳಿಸಿಯಿದೆ.

ಜನವರೀ 7ನೇ ಸೋಮವಾರ.	ಆಗಸ್ಟ್ 5ನೇ ಸೋಮವಾರ.
ಫಿಬ್ರವರೀ 4ನೇ ಸೋಮವಾರ.	ಸೆಪ್ಟಂಬರ್ 2ನೇ ಸೋಮವಾರ.
ಏಪ್ರೆಲ್ 8ನೇ ಸೋಮವಾರ.	ನವಂಬರ್ 4ನೇ ಸೋಮವಾರ.
ಜೂ೯ 10ನೇ ಸೋಮವಾರ.	

ಶಿವಮೊಗ್ಗ ಮತ್ತು ಕಡೂರು ಡಿಸ್ಟ್ರಿಕ್ಟುಗಳಲ್ಲಿ ಸೆಷನ್ಸಿಗೆ ಮೊಕದ್ದಮೆಗಳನ್ನು ಕಮಿಟ್ ಮಾಡತಕ್ಕ ಅಧಿಕಾರ ಹೊಂದಿರುವ ಮಾಜಿಸ್ಟ್ರೇಟರು ಹಾಗೆ ಕಮಿಟ್ ಮಾಡುವ ಮೊಕದ್ದಮೆಗಳಲ್ಲಿ ಆಯಾ ಕಕ್ಷಿಗಾರರಿಂದಲೂ ಸಾಕ್ಷಿಗಳಿಂದಲೂ ಸಹ, ಮೇಲೆಕಂಡ ತಾರೀಖುಗಳಲ್ಲಿ ಶಿವಮೊಗ್ಗ ಸೆಷನ್ಸ್ ಕೋರ್ಟಿನ ಮುಂದೆ ಅವರುಗಳು ಹಾಜರಾಗಲು ಬದ್ಧರಾಗಿರುವಂತೆ ಆಯಾ ಮಾಜಿಸ್ಟ್ರೇಟರು ಮುಚ್ಚಳಿಕೆಯನ್ನು ತೆಗದುಕೊಳ್ಳಬೇಕೆಂದು ಇದರ ಮೂಲಕ ಅಪ್ಪಣೇ ಮಾಡಲ್ಪಟ್ಟಿದಾರೆ.

ಶಿವಮೊಗ್ಗ ಡಿಸ್ಟ್ರಿಕ್ಟು ಮಾಜಿಸ್ಟ್ರೇಟರು, ಮೇಲೆಕಂಡ ತಾರೀಖುಗಳಲ್ಲಿ ಎದಿನಂತೆ ಪೋಲೀಸ್ ವಿಚಾರಣೆಗಳನ್ನು ಮಾಡತಕ್ಕದ್ದು.

ತಾರೀಖು 12ನೇ ಡಿಸಂಬರ್ 1888ನೇ ಇಸವಿ.

ಚಿತ್ರದುರ್ಗ ಡಿಸ್ಟ್ರಿಕ್ಟಿನಿಂದ ಕಮಿಟಾದ ಮೊಕದ್ದಮೆಗಳ ಸೆಷನ್ಸ್ ದರ್ಯಾಫ್ತ್ತಿಯು ಚಿತ್ರದುರ್ಗದಲ್ಲಿ 1889ನೇ ಇಸವಿಯ ಈ ಕೆಳಗೆ ಕಾಣಿಸುವ ತಾರೀಖುಗಳಲ್ಲಿ ನಡೆಯುವದು ಯೆಂದು ಇದರ ಮೂಲಕ ತಿಳಿಸಿ ಇದೆ.

ಮಾರ್ಚೀ 4ನೇ ಸೋಮವಾರ.	ಅಕ್ಟೋಬರ್ 14ನೇ ಸೋಮವಾರ.
ಜುಲೈ 1ನೇ ಸೋಮವಾರ.	ಡಿಸಂಬರ್ 2ನೇ ಸೋಮವಾರ.

ಸೆಷನ್ಸಿಗೆ ಮೊಕದ್ದಮೆಗಳನ್ನು ಕಮಿಟ್ ಮಾಡತಕ್ಕ ಅಧಿಕಾರ ಹೊಂದಿರುವ ಮಾಜಿಸ್ಟ್ರೇಟರು ಹಾಗೆ ಕಮಿಟ್ ಮಾಡುವ ಮೊಕದ್ದಮೆಗಳಲ್ಲಿ ಆಯಾ ಕಕ್ಷಿಗಾರರಿಂದಲೂ ಸಾಕ್ಷಿಗಳಿಂದಲೂ ಸಹ, ಮೇಲೆಕಂಡ ತಾರೀಖುಗಳಲ್ಲಿ ಚಿತ್ರದುರ್ಗದಲ್ಲಿ ಸೆಷನ್ಸ್ ಕೋರ್ಟಿನ ಮುಂದೆ ಅವರುಗಳು ಹಾಜರಾಗಲು ಬದ್ಧರಾಗಿರುವಂತೆ ಆಯಾ ಮಾಜಿಸ್ಟ್ರೇಟರು ಮುಚ್ಚಳಿಕೆಯನ್ನು ತೆಗದುಕೊಳ್ಳಬೇಕೆಂದು ಇದರ ಮೂಲಕ ಅಪ್ಪಣೆ ಮಾಡಲ್ಪಟ್ಟಿದಾರೆ.

ಚಿತ್ರದುರ್ಗ ಡಿಸ್ಟ್ರಿಕ್ಟು ಮಾಜಿಸ್ಟ್ರೇಟರು ಮೇಲೆಕಂಡ ತಾರೀಖುಗಳಲ್ಲಿ ಎಂದಿನಂತೆ ಪೋಲೀಸ್ ವಿಚಾರಣೆಗಳನ್ನು ಮಾಡತಕ್ಕದ್ದು.

ಟಿ. ನರಹರಿರಾವ್,
ಸೆಷನ್ಸ್ ಜಡ್ಜ್.

ಗವರ್ಮೆಂಟ್ ತಯಾರೀ ಬಾಮಿತು ಸಿಂಕೋನಾ ಫೆಬ್ರಿಫ್ಯೂಜ್ ಎಂಬ ಔಷಧ.

ಈ ಔಷಧವು, ಕ್ವಿನ್ಯೆಗೆ ಬದಲಾಗಿ ಉಪಯೋಗಿಸತಕ್ಕ ಬಹಳ ಯೋಗ್ಯವಾದ ಔಷಧವಾಗಿರುತ್ತೆ. ಜನಗಳಿಗಾಗಿ ವ ಧರ್ಮಾರ್ಥ ವಾಗಿ ಗವರ್ಮೆಂಟ್ ಆಫೀಸರಿಗಳು ಕೊಂಡು ಕೊಳ್ಳಬಹುದು, ಒಂದು ಸಲಕ್ಕೆ ಇಪ್ಪತ್ತು ಔನ್ಸುಗಳು ತೆಗದುಕೊಳ್ಳುವ ಯಾವ ಮನುಷ್ಯ ನಾದರೂ ಕಲ್ಕತ್ತೆಯಲ್ಲಿ ಬೊಟಾನಿಕಲ್ ಗಾರ್ಡನ್ ಸೂಪರ್‌ಟೆಂಡೆಂಟರ ಬೆಕೆಯಿಂದ ಇದರಡಿ ಕಂಡ ದರಗಳ ಪ್ರಕಾರ ನಗದು ಕೊಟ್ಟೇ ಕೊಂಡುಕೊಳ್ಳಬೇಕಾಗಿರುತ್ತೆ. ನಾಲ್ಕು ಔನ್ಸ್ ಔಷಧವುಳ್ಳ ತಗರದ ಡಬ್ಬೀ ಒಂದಕ್ಕೆ ರೂ. 4—8—0; ಎಂಟು ಔನ್ಸುವುಳ್ಳ ಡಬ್ಬಿಗೆ ರೂ. 8—8—0; ಒಂದು ಪೌಂ ಔಷಧವುಳ್ಳ ಡಬ್ಬಿಗೆ ರೂ. 16—8—0; ಬೊಟಾನಿಕಲ್ ಗಾರ್ಡನ್ ಸೂಪರ್‌ಟೆಂಡೆಂಟರು ಇದರಡಿ ಕಂಡ ದರ ಪ್ರಕಾರ ನಗದಿಗೇನೇ ಸರ್ವಜನಗಳಿಗೂ ಒದಗಿಸ ಬಹುದು; ನಾಲ್ಕು ಔನ್ಸುವುಳ್ಳ ಡಬ್ಬಿಯಂದಕ್ಕೆ ರೂ. 5—8—0, ಎಂಟು ಔನ್ಸುವುಳ್ಳ ಡಬ್ಬಿಗೆ ರೂ. 10—8—0, ಒಂದು ಪೌಂವುಳ್ಳ ಡಬ್ಬಿಗೆ 20 ರೂಪಾಯಿ, ಈ ಔಷಧವು ಕಲ್ಕತ್ತೆಯಲ್ಲಿ ಮುಖ್ಯ ಮುಖ್ಯ ಯೂರೋಪಿಯನ್ ನೇಟೀವ್ ಮದ್ದಿನಂಗಡಿಯವರಿಂದ ಮಾರಲ್ಪಡುತ್ತೆ. ಸದರೀ ಕಿಮ್ಮತಿನೊಂದಿಗೆ ದರ 4 ವ 8 ಔನ್ಸ್ ತಗರದ ಡಬ್ಬಿಗೆ ಎಂಟು ಆಣೆ ಟಪ್ಪಾಲ್ ಹಾಸಲು, ಒಂದು ಪೌಂ ಡಬ್ಬಿಗೆ ಹನ್ನೆರಡು ಆಣೆ ಹಾಸಲೂ ಕೊಡಬೇಕು.